Mr. SPEAKER.—The cut motion ?

Sri B. HUTCHE GOWDA.—No, Sir, not the cut motion.

ಶ್ರೀ ಎಸ್. ಕರಿಯಪ್ಪನವರು.— ನಾನು ಇದನ್ನು ಒತ್ತಾಯ ಪಡಿಸುವುದಿಲ್ಲ. ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

Mr. SPEAKER.—Has the Member the leave of the House to withdraw his cut motion ?

(Permission was not granted.)

Mr. SPEAKER.—The question is:

'That thedemand be reduced by Rs. 100.'

The motion was negatived.

The Assembly rose for Lunch at Seven Minutes past Three of the Clock and reassembled at Forty-three Minutes past Three of the Clock.

[Mr. SPEAKER in the Chair.]

Statement *re.* Extension of Time.

Sri A. G. RAMACHANDRA RAO.—One question was raised this morning and that is regarding the extension of the number of days for moving cut motions and demands by two days. The rules are clear that not less than ten days should be given. Even this period was fixed with the knowledge of Janab Mohamed Imam. We have already sat for ten days and we have to sit for ten days more. If we have to sit further for a few more days other Government work is likely to be interfered with. So Government regret that they cannot agree for any further extension of time.

Preservation of Forest Wealth and Afforestation.

Sri K. PUTTASWAMY (Srirangapatna).—Sir, I move.—

"That the demand under the head '10. Forest' for Rs. 25,12,000 be reduced by Rs. 100 (to urge upon the Government the importance of preservation of Forest Wealth and afforestation."

ಅರಣ್ಯ ಸಂಪತ್ತನ್ನು ರಕ್ಷಿಸುವ ಮತ್ತು ಬೆಳೆಸುವ ಪ್ರಾಮುಖ್ಯತೆಗೆ ಸರ್ಕಾರದ ಗಮನವನ್ನು ಎಳೆಯುವುದಕ್ಕೆ ಈ ಅರಣ್ಯ ಶಾಖೆಯ ಖರ್ಚಿಗಾಗಿ ಕೇಳಿರುವ 25 ಲಕ್ಷದ 12 ಸಾವಿರ ರೂಪಾಯಿಗಳಲ್ಲಿ 100 ರೂಪಾಯಿ ಖೋತಾ ಆಗಬೇಕೆಂಬ ನಿರ್ಣಯವನ್ನು ಸಭೆಯಲ್ಲಿ ಮಂಡಿಸಲಿಚ್ಛಿಸುತ್ತೇನೆ. ಈಗ್ಗೆ ಕೆಲವಾರು ವರ್ಷಗಳಿಂದ ದೇಶದಲ್ಲಿರುವ ಅರಣ್ಯ ಸಂಪತ್ತು ಕ್ಷೀಣಿಸುತ್ತಾ ಬಂದಿರುವ ಅಂಶ ಮಹಾಜನರಿಗೆ ಎಲ್ಲರಿಗೂ ತಿಳಿದಿರುವುದಾಗಿದೆ. ಅದರಲ್ಲೂ ಈ ಹೆಚ್ಚುಬೆಳೆ ಬೆಳೆಯಬೇಕೆಂಬ ಒಂದು ಯೋಜನೆಯನ್ನು ಸರ್ಕಾರದವರು ಕೈಕೊಂಡ ಮೇಲೆ ಅರಣ್ಯ ಪ್ರದೇಶದಲ್ಲಿ ಬಹುಭಾಗವನ್ನು ಹೆಚ್ಚು ಬೆಳೆ ಬೆಳೆಯುವ ಯೋಜನೆಯಲ್ಲಿ ಹಲವಾರು ರೈತರಿಗೆ ಕೊಟ್ಟಿದ್ದಾರೆ. ದೇಶದಲ್ಲಿ ಈಗ ಆರಂಭಕ್ಕೆ ಅನುಕೂಲವಾಗಿರುವ ಪ್ರದೇಶ ಬಹಳವಾಗಿದೆ. ಅಲ್ಲಿ ಸರಿಯಾಗಿ ಬೆಳೆ ಬೆಳೆಯುತ್ತಾ ಇಲ್ಲ. ಆರಂಭಕ್ಕೆ ಲಾಯಕ್ಕಾಗಿರುವ ಸಾವಿರಾರು ಎಕರೆ ಪ್ರದೇಶ ಪಾಳುಬಿದ್ದಿದೆ. ಪಾಳು ಬಿದ್ದಿರುವ ಜಮೀನನ್ನು ವ್ಯವಸಾಯಕ್ಕೆ ತರುವ ಪ್ರಯತ್ನ ಅಷ್ಟೊಂದು ಜಯಪ್ರದವಾಗಿ ನೆರವೇರಿಲ್ಲ. ಅದಕ್ಕೆ ಅನೇಕ ಅಡ್ಡಿ, ಅಡಚಣೆಗಳಿರಬಹುದು. ವ್ಯವಸಾಯದ ಕಸಬಿನಲ್ಲಿ ತೊಡಗದೇ ಇರುವ ಅನೇಕರಿಗೆ ಆ ಜಮೀನು ಸೇರಿ ಅವರು ವ್ಯವಸಾಯವನ್ನು ಮಾಡದೇ ಇದ್ದರೂ ಮತ್ತು ಸರಿಯಾದ ರೈತಾಬಾದು ಇಲ್ಲದೆ ಆ ಪ್ರದೇಶ ವೆಲ್ಲಾ ಪಾಳುಬಿದ್ದಿದ್ದರೂ, ಈ ನೈಸರ್ಗಿಕವಾದ ಪ್ರಕೃತಿ ಸಂಪತ್ತಿರುವ ಅರಣ್ಯ ಪ್ರದೇಶವನ್ನೂ ವ್ಯವಸಾಯಕ್ಕೆ ಕೊಟ್ಟಿರುವುದರಿಂದ ಅರಣ್ಯ ಸಂಪತ್ತು ನಶಿಸಿ ಹೋಗುತ್ತಿದೆ. ವನಸಂಪತ್ತು ದೇಶದ ಅಭಿವೃದ್ಧಿಗೆ ಎಷ್ಟು ಅತ್ಯಗತ್ಯ ಎಂಬ ವಿಚಾರವನ್ನು ಒತ್ತಿ ಒತ್ತಿ ಹೇಳಬೇಕಾಗಿಲ್ಲ. ಈ ದೇಶದಲ್ಲಿ ಮಳೆ ಇತ್ತೀಚೆಗೆ ಕಡಮೆಯಾಗಿರುವುದಕ್ಕೂ ಮತ್ತು ಕಾಲಕಾಲಕ್ಕೆ ಮಳೆ ಬೀಳದೆ ಇರುವುದಕ್ಕೂ ಅರಣ್ಯಸಂಪತ್ತು ಕ್ಷೀಣಿಸಿರುವುದೇ ಕಾರಣ ಎಂದು ತಿಳಿದವರು ಹೇಳುತ್ತಾರೆ. ಅರಣ್ಯ ಸಂಪತ್ತನ್ನು ಹೆಚ್ಚಿಸುವುದು ಮುಖ್ಯವಾದ ಕೆಲಸ. ಈ ಕೆಲಸದಲ್ಲಿ ಸರ್ಕಾರ ಯಾವ ಕಾರ್ಯವನ್ನು ಕೈಕೊಂಡಿದೆ ? ಇನು ಎಷ್ಟು ಆವಶ್ಯಕವೋ ಅಷ್ಟುಮಟ್ಟಿಗೆ ಈ ಕಾರ್ಯ ಸಾಗುತ್ತಾ ಇಲ್ಲ. ಅರಣ್ಯವನ್ನು ಬೆಳೆಸುವ ಕೆಲಸಕ್ಕೆ ಸಾಕಾದಷ್ಟು ಸಿಬ್ಬಂದಿ, ಸಾಕಾದಷ್ಟು ಗಮನ ಮತ್ತು ಸಾಕಾದಷ್ಟು ಹಣ ಇವನ್ನು ನಾವು ಮೀಸಲಾಗಿಟ್ಟಿದ್ದೇವೆಯೇ ? ಮೈಸೂರು ದೇಶ, ಅರಣ್ಯ ಸಂಪತ್ತಿನಲ್ಲಿ ಹೆಸರಾದ ದೇಶ. ಇಲ್ಲಿ ಬರಬರುತ್ತಾ ಅರಣ್ಯ ಸಂಪತ್ತು ಕಳೆದುಹೋಗುತ್ತದೆಯೋ ಏನೋ; ಕ್ಷೀಣಿಸಿ ಹೋಗುತ್ತದೆಯೋ ಏನೋ ಎಂಬ ಸಂಶಯ ಬಂದಿದೆ. ಮೈಸೂರು, ಬೆಂಗಳೂರು ಇಂಥಾ ದೊಡ್ಡ ಪಟ್ಟಣಗಳಿಗಾಗಿ ಅರಣ್ಯ ಸಂಪತ್ತನ್ನು ಸೂರೆಮಾಡಿ ಅಲ್ಲಿ ನಿತ್ಯದ ಬಳಕೆಗೆ ಬೇಕಾಗುವ ಸೌದೆ ತಂದುಕೊಡುತ್ತಾ ಇದ್ದಾರೆ. ಮೈಸೂರು ದೇಶದಲ್ಲಿ ವಿದ್ಯುಚ್ಛಕ್ತಿ ತಯಾರಿಕೆ ಹೆಚ್ಚಾಗಿರುವಾಗ ಮೈಸೂರು, ಬೆಂಗಳೂರಿನಂಥ ಮುಖ್ಯ ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯನ್ನು ಅಡಿಗೆಗೆ ಬಳಸುವುದನ್ನು ಕಡ್ಡಾಯವಾಡುವುದರ ಮೂಲಕ ಅಥವಾ ಪ್ರೋತ್ಸಾಹ ಕೊಡುವುದರ ಮೂಲಕ ಅರಣ್ಯ ಸಂಪತ್ತನ್ನು ರಕ್ಷಿಸಬಹುದು. ಇನ್ನೂ ಈ ಅರಣ್ಯ ಸಂಪತ್ತನ್ನು ರಕ್ಷಿಸುವುದಕ್ಕೂ ಬಳಸುವುದಕ್ಕೂ ನಾನಾ ಮಾರ್ಗಗಳು ಇವೆ. ಸಾಮಾನ್ಯವಾಗಿ ತಿಳಿದೇಇರತಕ್ಕ ವುಗಳನ್ನು ಪುನಃಪುನಃ ಒತ್ತಿಹೇಳಿ ಈ ಸಭೆಯ ಹೊತ್ತನ್ನು ಕಳೆಯುವುದಕ್ಕೆ ಇಷ್ಟವಿಲ್ಲ. ಸರ್ಕಾರದವರು ಈ ಕಡೆ ಈಗ ಕೊಡುತ್ತಿರುವುದಕ್ಕಿಂತ ಹೆಚ್ಚು ಗಮನ ಕೊಡ ಬೇಕು ಎಂಬ ಬಗ್ಗೆ ತಮ್ಮ ಗಮನವನ್ನು ಎಳೆಯುವ ಉದ್ದೇಶದಿಂದ ಖೋತಾ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದ್ದೇನೆ.